ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

# ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಕಂದಾಯ ಇಲಾಖೆ ಹಾಗೂ ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿ(ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027. ದೂರವಾಣಿ 080-22109665

---

**ವಿಷಯ:** ಶ್ರೀ ಮುನಿಶಾಮಿರೆಡ್ಡಿ, ವಿಶೇಷ ತಹಶೀಲ್ದಾರ್, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಶಿಸ್ತು ಕ್ರಮದ ಬಗ್ಗೆ.

**ಉಲ್ಲೇಖ:** ತಹಶೀಲ್ದಾರ್, ಯಲಹಂಕ ತಾಲ್ಲೂಕುರವರ ಪತ್ರ ಸಂಖ್ಯೆ: ಸಿಬ್ಬಂದಿ(1)ಸಿಆರ್/03/24-25 ದಿನಾಂಕ:04-02-2025, 05-02-2025, 06-02-2025 ಮತ್ತು 10-02-2025.

********

**ಪ್ರಸ್ತಾವನೆ:-**

ತಹಶೀಲ್ದಾರ್, ಯಲಹಂಕ ತಾಲ್ಲೂಕುರವರ ಉಲ್ಲೇಖದ ಪತ್ರಗಳಲ್ಲಿ, ಶ್ರೀ ಮುನಿಶಾಮಿರೆಡ್ಡಿ, ವಿಶೇಷ ತಹಶೀಲ್ದಾರ್, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರು ದಿನಾಂಕ:04-02-2025ರಿಂದ ತಹಲ್‌ವರೆಗೆ ಮೇಲಧಿಕಾರಿಗಳ ಪೂರ್ವಾನುಮತಿ, ರಜೆ ಮಂಜೂರಾತಿ ಪಡೆಯದೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ. ಮುಂದುವರೆದು, ಮೇಲ್ಕಂಡ ಅಧಿಕಾರಿಯು ಪಹಣಿಯಲ್ಲಿ ಜಮೀನಿನ ಮಾಲೀಕರ ಹೆಸರನ್ನು ಸೇರಿಸಲು ರೂ. 10.00 ಲಕ್ಷಗಳಿಗೆ ಬೇಡಿಕೆ ಇಟ್ಟು, ಮುಂಗಡವಾಗಿ ರೂ. 3.00 ಲಕ್ಷ ಹಣ ಪಡೆದು, ನಂತರ ರೂ. 2.00 ಲಕ್ಷ ಹಣವನ್ನು ನೀಡುವಂತೆ ಬೇಡಿಕೆ ಇಟ್ಟಿರುವ ಬಗ್ಗೆ ಮಾನ್ಯ ಲೋಕಾಯುಕ್ತರಿಗೆ ಶ್ರೀ ಮಹೇಶ್, ವಕೀಲರು ಇವರಿಂದ ದೂರು ಬಂದ ಹಿನ್ನೆಲೆಯಲ್ಲಿ, ದಿ:03-02-2025 ರಂದು ಟ್ರ್ಯಾಪ್ ಕಾರ್ಯಾಚರಣೆ ನಡೆಸಿ, ಸದರಿ ಅಧಿಕಾರಿಯನ್ನು ಬಂಧಿಸಿ ವಶಕ್ಕೆ ಪಡೆದಿರುವುದಾಗಿ ಹಲವು ದಿನಪತ್ರಿಕೆಗಳಲ್ಲಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಗೊಂಡಿರುತ್ತದೆ ಎಂದು ವರದಿಯೊಂದಿಗೆ ಪತ್ರಿಕಾ ತುಣುಕಿನ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಕರಣದಲ್ಲಿ ಶ್ರೀ ಮುನಿಶಾಮಿರೆಡ್ಡಿ ವಿಶೇಷ ತಹಶೀಲ್ದಾರ್, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರನ್ನು ತನಿಖಾ ಸಂಸ್ಥೆಯು ನಡೆಸಿದ ಟ್ರ್ಯಾಪ್ ಕಾರ್ಯಾಚರಣೆ ಮತ್ತು ಅಧಿಕಾರಿಯ ಬಂಧನದ ಕುರಿತು ಅಧಿಕೃತ ಮಾಹಿತಿ ತನಿಖಾ ಸಂಸ್ಥೆಯಿಂದ ಸ್ವೀಕೃತವಾಗಿರುವುದಿಲ್ಲ.

ವಿಶೇಷ ತಹಶೀಲ್ದಾರ್‌ರವರು ತಾಲ್ಲೂಕಿನ ವಿವಿಧ ಅರೆ ನ್ಯಾಯಿಕ ಪ್ರಕರಣಗಳ ಪೀಠಾಧಿಕಾರಿಯಾಗಿ ಕಾರ್ಯ ನಿರ್ವಹಿಸಬೇಕಾಗಿದ್ದು, ಜವಾಬ್ದಾರಿಯುತವಾದ ಹುದ್ದೆಯಾಗಿರುತ್ತದೆ. ಆದರೆ ಸದರಿ ಅಧಿಕಾರಿಯು ಮೇಲಧಿಕಾರಿಗಳ ಪೂರ್ವಾನುಮತಿ, ರಜೆ ಮಂಜೂರಾತಿ ಪಡೆಯದೆ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗುವ ಮೂಲಕ ಕಛೇರಿಯ ಸಾರ್ವಜನಿಕ ಮತ್ತು ಆಡಳಿತಾತ್ಮಕ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟು ಮಾಡಿರುವುದು ಕಂಡುಬರುತ್ತದೆ.

ಅಲ್ಲದೆ, ಉಲ್ಲೇಖದ ವರದಿ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗಿರುವಂತೆ ಲೋಕಾಯುಕ್ತರಲ್ಲಿ ದಾಖಲಾದ ದೂರಿನ ಮೇರೆಗೆ ಟ್ರ್ಯಾಪ್ ಕಾರ್ಯಾಚರಣೆ ನಡೆದಿದೆ ಎನ್ನಲಾದ ದಿನಾಂಕದಿಂದ ಸದರಿ ಅಧಿಕಾರಿಯು ಕರ್ತವ್ಯಕ್ಕೆ ಗೈರು ಹಾಜರಾಗಿದ್ದು, ಈ ಅಧಿಕಾರಿಯು ಮೇಲ್ಕಂಡ ಪ್ರಕರಣದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ವ್ಯಕ್ತವಾಗುತ್ತದೆ. ಸದರಿ ಅಧಿಕಾರಿಯವರ ಈ ವರ್ತನೆಯು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿಗಳು, 2021ಕ್ಕೆ ವಿರುದ್ಧವಾಗಿರುತ್ತದೆ.

ಆದ್ದರಿಂದ ಸದರಿಯವರು ಸರ್ಕಾರಿ ಸೇವೆಗೆ ಅನಧಿಕೃತ ಗೈರು ಹಾಜರಾಗುವ ಮೂಲಕ ತೋರಿರುವ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯತೆಯನ್ನು ಹಾಗೂ ಲೋಕಾಯುಕ್ತ ಪ್ರಕರಣದಲ್ಲಿ ಭಾಗಿಯಾಗಿರುವ

Scanned with OKEN Scanner
Scanned with OKEN Scanner
Scanned with OKEN Scanner

ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿರುವುದನ್ನು ಪರಿಗಣಿಸಿ, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದು ಅಗತ್ಯವೆಂದು ಈ ಪ್ರಾಧಿಕಾರವು ಅಭಿಪ್ರಾಯಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಸಿಸಿಎ.ಸಿಆರ್/29/2024-25 ದಿನಾಂಕ: 10-02-2025**

ಅಮ್ಲಾನ್ ಆದಿತ್ಯ ಬಿಸ್ವಾಸ್, ಭಾ.ಆ.ಸೇ., ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಹಾಗೂ ಶಿಸ್ತು ಪ್ರಾಧಿಕಾರಿ ಆದ ನಾನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(8)ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, **ಮುನಿಶಾಮಿರೆಡ್ಡಿ (ತಹಶೀಲ್ದಾರ್ ಗ್ರೇಡ್-2 ವೃಂದ), ವಿಶೇಷ ತಹಶೀಲ್ದಾರ್, ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ** ಇವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತೇನೆ.

ನಿಲಂಬನಾ ಅವಧಿಯಲ್ಲಿ ಸದರಿಯವರ ಹುದ್ದೆಯ **ಹಕ್ಕಿನ ಸ್ಥಾನವನ್ನು(ಲೀನ್) ತಹಶೀಲ್ದಾರ್ ಗ್ರೇಡ್-2, Soraba ತಾಲ್ಲೂಕು, Shimoga ಜಿಲ್ಲೆ** ಹುದ್ದೆಗೆ ವರ್ಗಾಯಿಸಿದೆ.

ಸದರಿಯವರು ನಿಲಂಬನೆಯ ಅವಧಿಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1958ರ ನಿಯಮ 98ರ ಪ್ರಕಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಮುಂದುವರೆದು, ಸದರಿ ಅಧಿಕಾರಿಯು ದಿನಾಂಕ:04-02-2025ರಿಂದ ದಿನಾಂಕ: 10-02-2025 ರವರೆಗೆ ಕರ್ತವ್ಯಕ್ಕೆ ಗೈರು ಹಾಜರಾದ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳು, 1958ರ ನಿಯಮ 14(ಎ)ರನ್ವಯ **"ಲೆಕ್ಕಕ್ಕಿಲ್ಲದ ಅವಧಿ"** (Dies-Non) ಎಂದು ಪರಿಗಣಿಸಿ ಆದೇಶಿಸಿದೆ.

**ಪ್ರಾದೇಶಿಕ ಆಯುಕ್ತರು**
**ಹಾಗೂ ಶಿಸ್ತು ಪ್ರಾಧಿಕಾರ,**
**ಬೆಂಗಳೂರು ವಿಭಾಗ, ಬೆಂಗಳೂರು.**

<u>ಪ್ರತಿಯನ್ನು ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ:-</u>

(1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಸಲ್ಲಿಸುತ್ತಾ, ಮೇಲ್ಕಂಡಂತೆ ಸದರಿಯವರ **ಹುದ್ದೆಯ ಲೀನ್ ವರ್ಗಾವಣೆಯನ್ನು ಸ್ಥಿರೀಕರಿಸಲು** ಕೋರಿದೆ.
(2) ಮಹಾಲೇಖಪಾಲರು (ಎ & ಇ), ಕರ್ನಾಟಕ ವಲಯ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
(3) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಮತ್ತು ಶಿವಮೊಗ್ಗ ಜಿಲ್ಲೆ.
(4) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ಸಾಗರ ಉಪವಿಭಾಗ.
(5) ತಹಶೀಲ್ದಾರ್, ಯಲಹಂಕ ಮತ್ತು ಸೊರಬ ತಾಲ್ಲೂಕು.
(6) ಸಂಬಂಧಪಟ್ಟ ಅಧಿಕಾರಿಯವರಿಗೆ (ತಹಶೀಲ್ದಾರ್, ಯಲಹಂಕ ತಾಲ್ಲೂಕುರವರ ಮುಖಾಂತರ)
(7) ಈ ಕಛೇರಿಯ ಸಿಬ್ಬಂದಿ(2)ಶಾಖೆಗೆ.
(8) ಕಛೇರಿ ಪ್ರತಿ.

Scanned with OKEN Scanner
Scanned with OKEN Scanner
Scanned with OKEN Scanner

ಕರ್ನಾಟಕ ಸರ್ಕಾರ
ತಹಶೀಲ್ದಾರ್ ರವರ ಕಾರ್ಯಾಲಯ, ಮಿನಿವಿಧಾನಸೌಧ, ಯಲಹಂಕ ಬೆಂಗಳೂರು-560064
Telephone : 080-28560696. Fax : 080-28560763 Email:thasildarynk@gmail.com

ಸಂಖ್ಯೆ: ಸಿಬ್ಬಂದಿ/1/ಸಿಆರ್: 03/24-25 ದಿನಾಂಕ: 11/02/2025
ಇ ಕಛೇರಿ ಸಂಖ್ಯೆ:608818

ಗೆ,

ಉಪನಿರ್ದೇಶಕರು
ವಾರ್ತ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ನಂ. 17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ
(ಇನ್ ಫೆಂಟ್ರಿ ರಸ್ತೆ) ಬೆಂಗಳೂರು

ಮಾನ್ಯರೆ,

ವಿಷಯ: ಶ್ರೀ ಮುನಿಶಾಮಿ ರೆಡ್ಡಿ, ವಿಶೇಷ ತಹಶೀಲ್ದಾರ್ ಯಲಹಂಕ ತಾಲ್ಲೂಕು ರವರು ಅಮಾನತ್ತುಗೊಳಿಸಿರುವ ಬಗ್ಗೆ

ಉಲ್ಲೇಖ: ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರ ಬೆಂಗಳೂರು ರವರ ಆದೇಶದ ಸಂಖ್ಯೆ: ಸಿಸಿಎ/ಸಿಆರ್/29/24-25 ದಿನಾಂಕ:10-02-2025

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ ಶ್ರೀ ಮುನಿಶಾಮಿ ರೆಡ್ಡಿ, ಕ..ಆ.ಸೇ (ತಹಶೀಲ್ದಾರ್-2 ವೃಂದ) ವಿಶೇಷ ತಹಶೀಲ್ದಾರ್ ರವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿಯಂತ್ರಣ ಮತ್ತು ಮೇಮನವಿ)ನಿಯಮಗಳು 1957ರ ನಿಯಮ 10(8)ರ ಪ್ರಕಾರ ದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿಕಾರಿಯವರನ್ನು ಸೇವೇಯಿಂದ ಅಮಾನತ್ತು ಗೊಳಿಸಿ ಆದೇಶಿಸಿ ನೌಕರರನ್ನು ತಹಶೀಲ್ದಾರ್-2 ಸೊರಭ ತಾಲ್ಲೂಕು ಶಿವಮೊಗ್ಗ ಜಿಲ್ಲೆಗೆ ವರ್ಗಾಹಿಸಿ ಆದೇಶಿಸಿರುತ್ತಾರೆ.

ಸದರಿ ಅಮಾನತ್ತು ಅದೇಶವನ್ನು ಈ ಪತ್ರದೊಂದಿಗೆ ಲಗತ್ತಿಸುತ್ತ ಸದರಿ ಆದೇಶವನ್ನು ಸಾರ್ವಜನಿಕ ಪತ್ರಿಕೆಯಲ್ಲಿ ಉಚಿತವಾಗಿ ಪ್ರಕಟಿಸಲು ಹಾಗೂ ವಾರ್ತ ಪ್ರಸರಣದಲ್ಲಿ ಪ್ರಚೂರಪಡಿಸಲು ಕೋರಿದೆ.

ತಮ್ಮ ವಿಶ್ವಾಸಿ,

ತಹಶೀಲ್ದಾರ್,
ಯಲಹಂಕ ತಾಲ್ಲೂಕು,
ಯಲಹಂಕ.

ಪ್ರತಿಯನ್ನು:
1. ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕರ ಬೆಂಗಳೂರು ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಉಪವಿಭಾಗಾಧಿಕಾರಿಗಳು ಬೆಂಗಳೂರು ಉತ್ತರ ಉಪವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.

Scanned with OKEN Scanner